(ಈ ಹಂತದಲ್ಲಿ ಎಸ್. ಅಂಗಾರವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಬಂದರು)

ಅಧ್ಯಕ್ಷರು : ಮಾನ್ಯ ಬೋಪಯ್ಯನವರೆ, ನಿಮ್ಮ ಗಮನ ಸೆಳೆಯುವ ಸೂಚನೆಯ ವಿಷಯ ಬೇಡಿಕೆ ಮೇಲೆ ಚರ್ಚೆ ಇದೆ.

ಶ್ರೀ ಕೆ.ಜಿ. ಬೋಪಯ್ಯ : ನಾನು ಕೇಳಿರುವುದೆ ಬೇರೆ ಇವರ ವಿಷಯವೇ ಬೇರೆ ಇದೆ. ನಾನು ಕೇಳಿದ್ದು ಪಂಚಾಯಿತಿಯಲ್ಲಿ ಅವರಿಗೆ ಬೇಕಾದ ಇಂಜಿನಿಯರ್‌ಗಳನ್ನು ಅಪಾಯಿಂಟ್‌ಮೆಂಟ್ ಮಾಡಿಕೊಂಡು ಅವರು ಆ ಕೆಲಸವನ್ನೆಲ್ಲಾ ಅವರು certify ಮಾಡಿಕೊಳ್ಳುತ್ತಿದ್ದರು.

ಅಧ್ಯಕ್ಷರು : ಇದನ್ನೇ ನಾಳೆ ನೀವು ದೀರ್ಘವಾಗಿ ಹೇಳಿ ಬಿಡಿ.

ಶ್ರೀ ಕೆ.ಜಿ. ಬೋಪಯ್ಯ : ಆಯಿತು.

ಅಧ್ಯಕ್ಷರು : OK.

2) **ವಿಷಯ :** ಕರ್ನಾಟಕ ರಾಜ್ಯದಲ್ಲಿರುವ ದಾಖಲೆರಹಿತ ಗ್ರಾಮಗಳಾದ ಹಟ್ಟಿ, ತಾಂಡಾ, ಹಾಡಿ ಹಾಗೂ ಕ್ಯಾಂಪ್ ಕಾಲೋನಿ, ಬಸ್ತಿಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸುವ ಬಗ್ಗೆ:

ಶ್ರೀ ಕೆ. ಶಿವಮೂರ್ತಿ (ಮಾಯಕೊಂಡ) : ಕರ್ನಾಟಕ ರಾಜ್ಯದಲ್ಲಿರುವ ದಾಖಲೆರಹಿತ ಗ್ರಾಮಗಳಾದ ಹಟ್ಟಿ, ತಾಂಡಾ, ಹಾಡಿ ಹಾಗೂ ಕ್ಯಾಂಪ್ ಕಾಲೋನಿ, ಬಸ್ತಿಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು) : ರಾಜ್ಯದಲ್ಲಿರುವ ಲಂಬಾಣಿ ತಾಂಡಾ, ಹಾಡಿ, ಹಟ್ಟಿ, ಮಜರೆ ಗ್ರಾಮ, ಕ್ಯಾಂಪ್ ಕಾಲೋನಿ, ನಾಯಕನಹಟ್ಟಿ, ಗೊಲ್ಲರಹಟ್ಟಿ, ಹ್ಯಾಮ್ಲೆಟ್ ಹಾಗೂ ಬಸ್ತಿಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸುವ ಬಗ್ಗೆ ಸರ್ಕಾರದಿಂದ ಆದೇಶ ಸಂಖ್ಯೆ :ಕಂಇ ೪೬ ಭೂದಾಪ ೨೦೧೩, ದಿನಾಂಕ: ೨೦.೦೭.೨೦೧೩ನ್ನು ಹೊರಡಿಸಲಾಗಿದ್ದು ಈ ಆದೇಶದಲ್ಲಿ ೫೦ಕ್ಕಿಂತ ಹೆಚ್ಚು ಕುಟುಂಬಗಳಿರುವ ಹಾಗೂ ೨೫೦ಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ

ಅಧಿಸೂಚಿಸಲಾಗುವುದೆಂದು ತಿಳಿಸಲಾಗಿರುತ್ತದೆ. ಅದರಂತೆ, ಕರ್ನಾಟಕ ಭೂಕಂದಾಯ ಕಾಯಿದೆ ನಿಯಮ ೧೯೬೪ ಪ್ರಕರಣ (೫) ರನ್ವಯ ಅರ್ಹ ಪ್ರಸ್ತಾವನೆಗಳ ಬಗ್ಗೆ ಪರಿಶೀಲಿಸಿ ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚಾನಾ ಇಲಾಖೆಯ ಸಹಮತಿ ಪಡೆದುಕೊಂಡು ಕಂದಾಯ ಗ್ರಾಮಗಳೆಂದು ಘೋಷಿಸಲಾಗುತ್ತಿದೆ. ಇದರಿಂದಾಗಿ, ಅಂತಹ ಕಂದಾಯ ಗ್ರಾಮಗಳು ಮೂಲಸೌಲಭ್ಯ ಪಡೆಯಲು ಅರ್ಹವಾಗುತ್ತವೆ. ಈ ಸಂಬಂಧ ಅರಣ್ಯ ಭೂಮಿಯಲ್ಲಿ ಹಾಗೂ ಖಾಸಗಿ ಜಮೀನಿನಲ್ಲಿ ಇರುವ ಗ್ರಾಮಗಳನ್ನು ಹೊರತುಪಡಿಸಿ ಕಂದಾಯ ಗ್ರಾಮಗಳನ್ನಾಗಿ ಅಧಿಸೂಚಿಸಲು ಕ್ರಮ ವಹಿಸಲಾಗುತ್ತಿದ್ದು, ಜಿಲ್ಲಾಧಿಕಾರಿಗಳಿಗೆ ಸೂಕ್ತ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಕಳುಹಿಸುವಂತೆ ಸೂಚಿಸಲಾಗಿರುತ್ತದೆ.

ಖಾಸಗಿ ಮತ್ತು ಅರಣ್ಯ ಜಮೀನಿನಲ್ಲಿರುವ ಲಂಬಾಣಿ ತಾಂಡಾ, ಹಾಡಿ, ಹಟ್ಟಿ, ಮಜರೆ ಗ್ರಾಮ, ಕ್ಯಾಂಪ್ ಕಾಲೋನಿ, ನಾಯಕನಹಟ್ಟಿ, ಗೊಲ್ಲರಹಟ್ಟಿ, ಹ್ಯಾಮ್ಲೆಟ್, ಬಸ್ತಿ ಹಾಗೂ ಇತ್ಯಾದಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿಗಣಿಸಲು ಕಾನೂನಿನ ಸಮಸ್ಯೆ ಇರುತ್ತದೆ. ಖಾಸಗಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆದು ಅದಕ್ಕೆ ಪರಿಹಾರ ನೀಡಿ ನಂತರ ಪರಿಗಣಿಸಬೇಕಾಗುತ್ತದೆ. ಇದಕ್ಕೆ ಹಣಕಾಸಿನ ಸೌಲಭ್ಯವು ಬೇಕಾಗುತ್ತದೆ. ಅದೇ ರೀತಿ ಅರಣ್ಯ ಜಮೀನಿನಲ್ಲಿರುವುದನ್ನು ಪರಿಗಣಿಸಲು ಅರಣ್ಯ ಕಾಯ್ದೆಯಡಿ ನಿಯಮಾನುಸಾರ ಪರಿಶೀಲಿಸಬೇಕಿರುತ್ತದೆ ಅಥವಾ ಪರ್ಯಾಯ ಕಂದಾಯ ಜಮೀನನ್ನು ಗುರುತಿಸಿ ಅರಣ್ಯ ಇಲಾಖೆಗೆ ಹಸ್ತಾಂತರಿಸಬೇಕಾಗುತ್ತದೆ. ಪರಿಶಿಷ್ಟ ಪಂಗಡದವರು ಮಾತ್ರ ಇದ್ದಲ್ಲಿ ಅರಣ್ಯ ಜಮೀನಿನಿಂದ ಒಕ್ಕಲೆಬ್ಬಿಸಲು ಅವಕಾಶವಿರುವುದಿಲ್ಲ. ಆದರೆ, ಇವರ ಜೊತೆ ಇತರೆ ತಾಂಡಾದವರು ಸಹ ಇರುವುದರಿಂದ ಅರಣ್ಯ ಕಾಯಿದೆಯಡಿ ಪ್ರಸ್ತಾವನೆ ಕಳುಹಿಸಿ ಅನುಮತಿ ಪಡೆಯಬೇಕಿರುತ್ತದೆ. ಇದಕ್ಕೆ ಸಮಯಾವಕಾಶ ಬೇಕಾಗುತ್ತದೆ. ಮೂಲ ಗ್ರಾಮದ ಸರಹದ್ದಿನಿಂದ ಬೇರ್ಪಡಿಸಲು ಹಾಗೂ ಸರ್ವೆ ನಂಬರ್‌ಗಳನ್ನು ಬೇರ್ಪಡಿಸಲು ಆಯಾ ಪಂಚಾಯ್ತಿಯ ಠರಾವುಗಳು ಅವಶ್ಯಕವಾಗಿರುತ್ತವೆ.

ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತರವರು ಈ ರೀತಿಯ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವಲ್ಲಿ ಕಂಡು

ಬರುತ್ತಿರುವ ಕಾನೂನು. ಆಡಳಿತಾತ್ಮಕ ಮತ್ತು ತಾಂತ್ರಿಕ ಅಡಚಣೆಯನ್ನು ಗುರುತಿಸಲು ಹಾಗೂ ಅವುಗಳ ಕುರಿತು ಸೂಕ್ತ ಅಧ್ಯಯನ ನಡೆಸಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ತಜ್ಞರ ಸಮಿತಿಯೊಂದನ್ನು ರಚಿಸಿದ್ದು. ಈ ಸಮಿತಿಯ ಜಿಲ್ಲೆ ಹಾಗೂ ತಾಲ್ಲೂಕುಗಳಿಗೆ ಭೇಟಿ ನೀಡಿದಾಗ ಅಧಿಕಾರಿಗಳ ಸಭೆ/ಚರ್ಚೆ ಏರ್ಪಡಿಸಿದಲ್ಲಿ ಸಂಪೂರ್ಣ ಸಹಕಾರ ನೀಡುವಂತೆ ಹಾಗೂ ಎಲ್ಲಾ ಮಾಹಿತಿಗಳನ್ನು ಒದಗಿಸುವಂತೆ ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ ೧೧ ಭೂದಾಪು ೨೦೧೪, ದಿನಾಂಕ: ೨೮.೦೫.೨೦೧೪ರಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಈ ಸಮಿತಿಯ ನೀಡುವ ವರದಿಯನ್ನಾಧರಿಸಿ ದಾಖಲೆ ರಹಿತ ಗ್ರಾಮಗಳಾದ ಹಟ್ಟಿ ತಾಂಡಾ, ಹಾಡಿ ಹಾಗೂ ಕ್ಯಾಂಪ್ ಕಾಲೋನಿ, ಬಸ್ತಿಗಳಿಗೆ ಕಂದಾಯ ಗ್ರಾಮಗಳೆಂದು ಘೋಷಿಸಲು ಪರಿಶೀಲಿಸಿ ಕ್ರಮ ವಹಿಸಲಾಗುವುದು.

ಶ್ರೀ ಕೆ. ಶಿವಮೂರ್ತಿ : ಮಾನ್ಯ ಸಚಿವರು ಉತ್ತರವನ್ನು ಹೇಳಿದ್ದಾರೆ.

ಅಧ್ಯಕ್ಷರು : ಚರ್ಚೆಗೆ ಅವಕಾಶವಿಲ್ಲ.

ಶ್ರೀ ಕೆ. ಶಿವಮೂರ್ತಿ : ಅವರು ಕೂಡ signatories ಇದ್ದಾರೆ ಸರ್.

ಅಧ್ಯಕ್ಷರು : ಆಗುವುದಿಲ್ಲ ಬಿಡಿ. ನೋಡಿ ದಯವಿಟ್ಟು ಚರ್ಚೆಗೆ ಅವಕಾಶವಿಲ್ಲ. ಬೇರೆ ರೂಪದಲ್ಲಿ ಚರ್ಚೆಯನ್ನು ಮಾಡಿ.

(ಗೊಂದಲ)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, ಈಗ ೨೫ ಸಾವಿರ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡಿದ್ದಾರೆ. ತಾವು A,B,C ಎಂದು clarification ಮಾಡಿ. ಸಮಸ್ಯೆ ಇಲ್ಲದಿರುವುಗಳನ್ನು ಒಂದು ಭಾಗದಲ್ಲಿ clear ಮಾಡಿ ಸರ್. ಅಲ್ಪಸ್ವಲ್ಪ ಸಮಸ್ಯೆ ಇರುವುದನ್ನು A,B ಭಾಗ ಎಂದು ಮಾಡಿಕೊಳ್ಳಿ. ಬಹಳ ಸಮಸ್ಯೆ ಇರುವುದನ್ನು ಮೂರು ಭಾಗ ಮಾಡಿಕೊಂಡು ಅದರಲ್ಲಿ C ಎಂದು ಇರುವುದನ್ನು ಸ್ವಲ್ಪ ಲೇಟಾಗಿ ಮಾಡಬಹುದು. A,Bಯನ್ನು ಕ್ಲಿಯರ್ ಮಾಡುವುದಕ್ಕೆ ಪ್ಲಾನ್ ಮಾಡಿ ಸರ್.

ಶ್ರೀ ವಿ.ಶ್ರೀನಿವಾಸ್ ಪ್ರಸಾದ್ : ನಾನು ಬಂದು ಮೇಲೆ ಇಷ್ಟೊಂದು ಸಮಸ್ಯೆಗಳು ಇದ್ದುದರಿಂದ ಇದರ ಬಗ್ಗೆ ನಾವು ಚರ್ಚೆ ಮಾಡಿ ಏನು ಮಾಡಬೇಕು

ಎಂದು ಹೇಳಿ ಅದರ ಸಾಧ್ಯತೆಗಳ ಬಗ್ಗೆ ಪರಿಶೀಲಿಸಿ ಈಗ ಹೇಳಿದ್ದೇವೆ. ಕೊನೆಗೆ ನಾವು ಒಂದು ತೀರ್ಮಾನಕ್ಕೆ ಚರ್ಚೆ ಮಾಡಿ ಬಂದಿದ್ದೇವೆ. ನಿಮಗೆ ಹೇಳಿದೆ ಸರ್ಕಾರಿ ಜಮೀನಿನಲ್ಲಿರತಕ್ಕಂಥದ್ದರ ಬಗ್ಗೆ ಏನು ಸಮಸ್ಯೆ ಇಲ್ಲ. ಆದರೆ ಕಾಡಂಚಿನಲ್ಲಿ, ಕಾಡು ಪ್ರದೇಶದಲ್ಲಿ ಖಾಸಗಿ ಜಮೀನುಗಳಲ್ಲಿರತಕ್ಕಂಥದ್ದು ಕಾನೂನಿನ ಸಮಸ್ಯೆ ಮತ್ತು ಯಾವ ರೀತಿ ತೊಡಕಾಗಿರುತ್ತದೆ ಎನ್ನತಕ್ಕಂಥದ್ದನ್ನು ಹೇಳಿ, ಕೊನೆಗೆ ನಾವು ಈ ತೀರ್ಮಾನಕ್ಕೆ ಬಂದಿರುತ್ತೇವೆ. ಈ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದವರು ಮುಂದೆ ಬಂದಿದ್ದಾರೆ. ಅವರು ಅಧ್ಯಯನ ಮಾಡಿ ಅದರ ಬಗ್ಗೆ ವರದಿಯನ್ನು ಕೊಡುತ್ತಾರೆ. ಅವರಿಗೆ ಗೊತ್ತಿದೆ ಕೆಲವು ಕಡೆ ಸಭೆಗಳನ್ನು ಮಾಡಿ ಚರ್ಚೆ ಮಾಡಿ ಒಂದು ವರದಿಯನ್ನು ಕೊಡುತ್ತಾರೆ. ಅದರ ಮೇಲೆ ನಾವು ಒಂದು ಪರಿಹಾರವನ್ನು ಕಂಡು ಹಿಡಿಯಬಹುದು. ೨೦ ಸಾವಿರ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವುದಕ್ಕೆ ಸಾಧ್ಯತೆ ಇದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಅದಲ್ಲ ಪ್ರಶ್ನೆ. ಈಗ ಅಲ್ಲಿ ಏನಾಗಿದೆ ಎಂದರೆ forest land ನಲ್ಲಿ ಮನೆಯನ್ನು ಕಟ್ಟಿಕೊಂಡಿದ್ದಾರೆ. ಕೆಲವು ಸರ್ಕಾರಿ, ಕೆಲವು ಖಾಸಗಿ ಜಾಗದಲ್ಲಿ ಕಟ್ಟಿದ್ದಾರೆ. ಖಾಸಗಿಯವರು ಖಾಲಿ ಮಾಡಿ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ವಿ.ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು): ಈ ಸಮಸ್ಯೆ ಇರುವುದರಿಂದಲೇ ಅದಕ್ಕೆ ಪರಿಹಾರ ಏನು ಎಂದು ನಾನು ಕೇಳಿದ್ದು.

(ಗೊಂದಲ)

ಅಧ್ಯಕ್ಷರು : ನಾಳೆ ಅಥವಾ ನಾಳಿದ್ದು ಈ ವಿಷಯವನ್ನು ನಿಯಮ ೬೯ರ ಅಡಿಯಲ್ಲಿ ಚರ್ಚೆಗೆ ಹಾಕೋಣ. Discuss ಮಾಡಿ. ಈ ರೀತಿ ಮಾತನಾಡುವುದರಿಂದ ಬಗೆಹರಿಯುವುದಿಲ್ಲ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ : ಆಯಿತು, ನಿಯಮ ೬೯ರ ಅಡಿಯಲ್ಲಿ ಚರ್ಚೆಗೆ ಹಾಕಿ.

(ಗೊಂದಲ)

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಸರ್, ಇಷ್ಟು ಸ್ಪಷ್ಟವಾಗಿ ಹೇಳಿದ್ದೇವೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ : ಮನೆ ಖಾಲಿ ಮಾಡಿ ಎಂದು ನೋಟಿಸ್ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಮ್ಮಲ್ಲಿ Forest Department ರವರು ಹೋಗಿ ಮನೆ ಕಿತ್ತು ಹಾಕುತ್ತೇವೆ ಎಂದು ಹೇಳುತ್ತಾರೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ : ನೋಡಿ ಸರ್, ಮನೆ ಖಾಲಿ ಮಾಡಿ ಎಂದು ನೋಟಿಸ್ ಕಳುಹಿಸಿದ್ದಾರೆ. ತಮ್ಮ ಕಡೆ ಕೊಡುತ್ತೇನೆ ನೋಡಿ.

(ಗೊಂದಲ)

ಅಧ್ಯಕ್ಷರು : ಆಯಿತು ಈ ವಿಷಯವನ್ನು ನಿಯಮ ೬೯ ಅಡಿಯಲ್ಲಿ ಚರ್ಚೆಗೆ ಹಾಕೋಣ. ಈಗ ಚರ್ಚೆ ಮುಕ್ತಾಯವಾಗಿದೆ. ಒಂದು ಪ್ರಕಟಣೆ ಇದೆ.

ಪ್ರಕಟಣೆ

ವಿಧಾನಸಭಾ ಸದಸ್ಯರಾದ ಶ್ರೀ ಸಂತೋಷ್ ಎಸ್. ಲಾಡ್ ಅವರು, ವೈಯಕ್ತಿಕ ಕಾರಣದ ಹಿನ್ನೆಲೆಯಲ್ಲಿ, ದಿನಾಂಕ: ೨೩.೦೬.೨೦೧೪ ರಿಂದ ಪ್ರಸಕ್ತ ನಡೆಯುತ್ತಿರುವ ಅಧಿವೇಶನಕ್ಕೆ ಗೈರುಹಾಜರಾಗಲು ಅನುಮತಿಯನ್ನು ಕೋರಿ ಪತ್ರವನ್ನು ನೀಡಿರುತ್ತಾರೆ.

ಮಾನ್ಯ ಸದಸ್ಯರು, ಸದನಕ್ಕೆ ಪ್ರಸ್ತಾಪಿತ ಅವಧಿಯಲ್ಲಿ ಗೈರು ಹಾಜರಾಗಲು ಸದನದ ಸಹಮತಿ ಇದೆ ಎಂದು ಭಾವಿಸಲಾಗಿದೆ.

ಶ್ರೀ ಸಂತೋಷ್ ಎಸ್.ಲಾಡ್ ಅವರು ದಿನಾಂಕ:೨೩.೦೬.೨೦೧೪ ರಿಂದ ಪ್ರಸಕ್ತ ಅಧಿವೇಶನದ ಸಂದರ್ಭದಲ್ಲಿ ಸದನಕ್ಕೆ ಗೈರುಹಾಜರಾಗಲು ಅನುಮತಿ ನೀಡಲಾಗಿದೆ.

ಅಧ್ಯಕ್ಷರು : ಈಗ ಸದನವನ್ನು ಮುಂದೂಡಿ ನಾಳೆ ಬೆಳಗ್ಗೆ ೧೧.೦೦ ಕ್ಕೆ ಸೇರುವುದು.

(ಸದನವನ್ನು ಸಾಯಂಕಾಲ ೭ ಗಂಟೆ ೧೨ ನಿಮಿಷಕ್ಕೆ ಮುಂದೂಡಿ ದಿನಾಂಕ ೨೬.೦೬.೨೦೧೪ ರಂದು ಗುರುವಾರ ಬೆಳಗ್ಗೆ ೧೧.೦೦ ಗಂಟೆಗೆ ಸೇರಲು ನಿಶ್ಚಯಿಸಲಾಯಿತು.)

ಅನುಬಂಧ–1

ಮಹಾತ್ಮಗಾಂಧಿ ಉದ್ಯೋಗ ಭರವಸೆ ಯೋಜನೆ

124(268) ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) 2013–14ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ಉದ್ಯೋಗ ಭರವಸೆ ಯೋಜನೆ ಅಡಿಯಲ್ಲಿ ಜಾರಿಗೆ ತಂದ ಹೊಸ ಯೋಜನೆಗಳು ಯಾವುವು ;

(ಆ) ಹಾವೇರಿ ಜಿಲ್ಲೆಯಲ್ಲಿ ಈ ಯೋಜನೆಯಡಿಯಲ್ಲಿ ಗ್ರಾಮ ಪಂಚಾಯತಿವಾರು ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ;

(ಇ) ಹೊಸ ಯೋಜನೆಯನ್ನು ಜಾರಿಗೆ ತರದ ಗ್ರಾಮ ಪಂಚಾಯತಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳವುದೇ ?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :–

(ಅ) 2013–14 ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಈ ಕೆಳಕಂಡ ಹೊಸ ಕಾಮಗಾರಿಗಳನ್ನು ಜಾರಿಗೆ ಮಾಡಲಾಗಿರುತ್ತದೆ.

* ನಮ್ಮ ಹೊಲ ನಮ್ಮ ದಾರಿ
* ರೈತರ ಕಣ/ಒಕ್ಕಣೆ ಕಣ
* ರೈತರ ಭೂ–ಅಭಿವೃದ್ಧಿ
* ಸ್ಮಶಾನ ಅಭಿವೃದ್ಧಿ
* ಕುರಿ/ದನದ ದೊಡ್ಡಿ